CC No. 957 /2021
CW-2

ದಿನಾಂಕ 14.09.2023 ರಂದು ಸತ್ಯ ಪ್ರತಿಜ್ಞಾವಿಧಿಯನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಮ.ಕೆ.ಪಿ ವಕೀಲರಿಂದಃ**

1. ನಾನು ಬಿ.ಎ ಪದವಿಧರ. ನಾನು ವ್ಯವಸಾಯ ಮಾಡುತ್ತೇನೆ. ಫಿರ್ಯಾದಿ ಮತ್ತು ಆರೋಪಿತನ ಕುಟುಂಬಕ್ಕೆ ಒಟ್ಟು ಎಷ್ಟು ಆಸ್ತಿಗಳು ಇವೆ ನನಗೆ ನಿಖರವಾಗಿ ಗೋತ್ತಿಲ್ಲ ಆದರೆ ಫಿರ್ಯಾದಿಯ ಕುಟುಂಬಕ್ಕೆ 4 ಎಕರೆ 17 ಗುಂಟೆ ಜಮೀನು ಇರುವುದು ಮಾತ್ರ ಗೋತ್ತು. ಸಾಕ್ಷಿ ಮುಂದುವರೆದು ಆರೋಪಿಗೆ ಕೆ.ಗುಡ್ಡದಿನ್ನಿ ಗ್ರಾಮದಲ್ಲಿ 4 ಎಕರೆ ಜಮಿನು ಇರುವುದು ಗೋತ್ತು ಎಂದು ಹೇಳುತ್ತಾರೆ. ಪ್ರಕರಣ ಫಿರ್ಯಾದಿ ಒಕ್ಕಲುತನದ ಜೊತೆಗೆ ವಿಮೆ ಕಂಪನಿಯಲ್ಲಿ ಎಜೆಂಟ ಎಂದು ಕೆಲಸ ಮಾಡುತ್ತಾನೆ. ಫಿರ್ಯಾದಿ ಯಾವ ಯಾವ ಬ್ಯಾಂಕುಗಳಲ್ಲಿ ಖಾತೆ ಹೊಂದಿರುತ್ತಾನೆ ಅಂದರೆ ಗೋತ್ತಿಲ್ಲ ಸಾಕ್ಷಿ ಮುಂದುವರೆದು ಎಸ್.ಬಿ.ಐ ಬ್ಯಾಂಕಿನಲ್ಲಿ ಹೊಂದಿರುವುದು ಗೋತ್ತು ಎಂದು ಹೇಳುತ್ತಾರೆ. ಫಿರ್ಯಾದಿಯ ಜಮೀನು ಒಣ ಬೇಸಾಯ ಜಮೀನು. ಕಾಲುವೆಯ ನೀರು ಮುಟ್ಟುವುದಿಲ್ಲ ಅಂದರೆ ಸರಿಯಲ್ಲ. ಫಿರ್ಯಾದಿಗೆ ಒಕ್ಕಲುತನದಿಂದ, ಎಲ್.ಐ.ಸಿ ದಿಂದ ಬಂದ ಸಂಪಾದನೆಯಿಂದ ತಮ್ಮ ಕುಟುಂಬ ನಿರ್ವಹಣೆ ಮಾಡಲು ಮಾತ್ರ ಸಾಕಾಗುತ್ತದೆ ಅಂದರೆ ಸರಿಯಲ್ಲ. ಫಿರ್ಯಾದಿ ಒಕ್ಕಲುತನ, ಎಲ್.ಐ.ಸಿ ಜೊತೆಗೆ ಪುರೋಹಿತ ಎಂದು ಕೆಲಸ ಮಾಡಿ ಸಂಪಾದನೆ ಮಾಡುತ್ತಾನೆ. ನಾನು, ಫಿರ್ಯಾದಿ ಮತ್ತು ಒಬ್ಬ ಹಂಪಣ್ಣ ಇವರು ಕೂಡಿಕೊಂಡು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ನಿಗಮದಿಂದ ಜಮೀನುಗಳನ್ನು ಖರೀದಿ ಮಾಡಿಸುವ ವ್ಯವಹಾರ ಮಾಡುತ್ತೇವೆ ಅಂದರೆ ಸರಿಯಲ್ಲ. ಫಿರ್ಯಾದಿ ತನ್ನ ಹತ್ತಿರ ಜಮಾ ಮಾಡಿ ಇಟ್ಟುಕೊಂಡು ಹಣವನ್ನು ಆರೋಪಿತನಿಗೆ ಕೊಟ್ಟಿರುತ್ತಾನೆ. ಯಾವುದೇ ಬ್ಯಾಂಕಿನಿಂದ ತಂದಿರುವುದಿಲ್ಲ.

2. ಆರೊತನಿಗೆ ಸೇರಿದ ಜಮೀನು ಒಟ್ಟು ರೂ. 20,00,000/- ಕ್ಕೆ ಮಾರಾಟ ಮಾಡುವ ವ್ಯವಹಾರ ಆಗಿತ್ತು ಆ ಕ್ಕಾರಣಕ್ಕಾಗಿ ಫಿರ್ಯಾದಿ ಆರೋಪಿತನಿಗೆ ರೂ. 16,00,000/- ಕೊಟ್ಟಿರುತ್ತಾನೆ. ದಿಃ 15-11-2017 ರಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮದಿಂದ ಆರೋಪಿತನಿಗೆ ಸೇರಿದ ಜಮೀನು ಸರ್ವೆ ನಂ. 177/ಅ ಕ್ಷೇತ್ರ 2

ಎಕರೆ, 177/ಆ ಕ್ಷೇತ್ರ 4 ಎಕರೆ ಖರೀದಿ ಮಾಡುವ ಬಗ್ಗೆ ಪ್ರಕಟಣೆ ಹೊರಡಿಸಿರುತ್ತಾರೆ ಅಂದರೆ ಸಾಕ್ಷಿ ಅದು ಸುಳ್ಳಾಗಿ ಹೊರಡಿಸಿರುತ್ತಾರೆ ಎಂದು ಹೇಳುತ್ತಾರೆ. ಫಿರ್ಯಾದಿ ಮತ್ತು ಆರೋಪಿತನ ಮಧ್ಯ ಕರಾರು ಆಗಿದೆ ಎಂದು ಹೇಳಿದ ಸಮಯದಲ್ಲಿ, ಫಿರ್ಯಾದಿ ಬ್ಯಾಂಕನಲ್ಲಿ ಸಾಲ ಪಡೆದಿದ್ದ ಅಂದರೆ, ಸಾಕ್ಷಿ ಸದರಿ ಸಾಮಾನ್ಯವಾಗಿ ಬ್ಯಾಂಕನಲ್ಲಿ ಎಲ್ಲರೂ ಸಾಲ ಪಡೆಯುತ್ತಾರೆ ಎಂದು ಹೇಳುತ್ತಾರೆ. ಫಿರ್ಯಾದಿಗೆ ರೂ. 16,00,000/- ಕೊಡುವ ಶಕ್ತಿ ಇದ್ದರೆ ಬ್ಯಾಂಕಿನಲ್ಲಿ ಸಾಲ ಪಡೆಯುವ ಪ್ರಸಂಗ ಬರುವುದಿಲ್ಲ ಅಂದರೆ ಸರಿಯಲ್ಲ. ಫಿರ್ಯದಿಯಿಂದ ಆರೋಪಿ ರೂ. 16,00,000/- ಪಡೆದಿರುವ ಬಗ್ಗೆ ರಸೀದಿ ಪಡೆದಿರುವುದಿಲ್ಲ. ಸಾಕ್ಷಿ ಮುಂದುವರೆದು ಸಂಬಂಧಿಕರು ಇರುವುದರಿಂದ ಪಡೆದಿರುವುದಿಲ್ಲ ಎಂದು ಹೇಳುತ್ತಾರೆ. ಸಾಮಾನ್ಯವಾಗಿ ಹೆಚ್ಚಿನ ಹಣದ ವ್ಯವಹಾರ ಇದ್ದಾಗ ದಾಖಲೆ ಇಲ್ಲದೇ ಯಾರೋ ಸಾಲ ನೀಡುವುದಿಲ್ಲ ಅಂದರೆ ಸರಿಯಲ್ಲ. ಆರೋಪಿ ಒಟ್ಟು ರೂ. 20,00,000/- ಗಳಿಗೆ ತನ್ನ ಜಮೀನು ಮಾರಾಟ ಮಾಡಲು ಒಪ್ಪಿಕೊಂಡು ರೂ. 16,00,000/- ಮುಗಂಡ ಪಡೆದು ಉಳಿದ ರೂ. 4,00,000/- ನಕಾಶೆ ಮಾಡಿದ ನಂತರ ನೊಂದಣಿ ಸಮಯದಲ್ಲಿ ಕೊಡುವ ಮಾತುಕತೆ ಆಗಿತ್ತು. ಕರಾರಿನಂತೆ ಜಮೀನು ಸರ್ವೆ ಮಾಡಲು ಆರೋಪಿ ಮತ್ತು ಫಿರ್ಯಾದಿ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ. ಫಿರ್ಯಾದಿ ಮತ್ತು ಆರೋಪಿತನ ಮಧ್ಯ ಜಮೀನು ಮಾರಾಟದ ವ್ಯವಹಾರ ಆಗಿಲ್ಲ ಕಾರಣ ಜಮೀನು ಸರ್ವೆ ಮಾಡಲು ಅರ್ಜಿ ಸಲ್ಲಿಸಿಲ್ಲ ಅಂದರೆ ಸರಿಯಲ್ಲ. ಫಿರ್ಯಾದಿ ಆರೋಪಿತನಿಗೆ ಬಾಯಿ ಮಾತಿನ ಕರಾರಿನಂತೆ ನಕಾಶೆ ತಯಾರಿಸಿ, ಖರೀದಿ ಪತ್ರ ಮಾಡಿಕೊಡುವಂತೆ ನೋಟಿಸ್ ಕೊಟ್ಟಿಲ್ಲ. ಆರೋಪಿ ಜಮೀನು ಬೇರೆಯವರಿಗೆ ಮಾರಾಟ ಮಾಡಲು ತಯಾರು ನಡೆಸಿದ ಕಾರಣ ಫಿರ್ಯಾದಿ ಅದಕ್ಕೆ ಕೇಳಿದಾಗ ಹೆಚ್ಚಿನ ಹಣ ಬರುತ್ತಿರುವುದರಿಂದ ಮಾರಾಟ ಮಾಡುತ್ತಿರುವುದಾಗಿ ತಿಳಿಸಿದ್ದರು. ಆ ಬಗ್ಗೆ ಫಿರ್ಯಾದಿ ಜಮೀನು ಮಾರಾಟ ಮಾಡಲು ಎನೂ ತಯಾರು ಮಾಡಿಕೊಂಡಿದ್ದ ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಫಿರ್ಯಾದಿ ಮತ್ತು ಆರೋಪಿತನ ಮಧ್ಯ ಜಮೀನು

ಮಾರಾಟದ ಮಾತು ಕತೆ ದಿಃ 10-10-2020 ರಂದು ಮಾನ್ವಿಯಲ್ಲಿ ಇರುವ ಫಿರ್ಯಾದಿಯ ಮನೆಯಲ್ಲಿ ಆಗಿರುತ್ತದೆ. ಆ ಸಮಯದಲ್ಲಿ ಫಿರ್ಯಾದಿ, ಆರೋಪಿ, ಆರೋಪಿತನ ಮಗ, ನಾನು ಮತ್ತು ಹಂಪಣ ಇದ್ದೆವು. ನಮ್ಮನ್ನು ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ. ಆಗ ಸಮಯ ಬೆ.10 ರಿಂದ 11 ಗಂಟೆ ಆಗಿರಬಹುದು. ಆ ದಿನ ಫಿರ್ಯಾದಿ ಮನೆಯಲ್ಲಿ ಅವರ ಕುಟುಂಬದ ಸದಸ್ಯರು ಇರಲಿಲ್ಲ. ದಿಃ 10-10-2020 ರಂದು ಫಿರ್ಯಾದಿಯ ಮನೆಯಲ್ಲಿ ಆರೋಪಿತನ ಜಮೀನಿನ ಮಾರಾಟದ ಮಾತು ಕತೆ ಆಗಿರುತ್ತದೆ, ಆ ಸಮಯದಲ್ಲಿ ನಾವು ಹಾಜರು ಇದ್ದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಫಿರ್ಯಾದಿ ತನ್ನ ತಂದೆಯ ಸಹೋದರರ ಜಮೀನುಗಳು ಕರಾರು ಪತ್ರ ಮಾಡಿಕೊಂಡು ಪರಿಶಿಷ್ಟ ಜಾತಿ ಮತ್ತು ಪಂಗಡ ನಿಗಮಕ್ಕೆ ಮಾರಾಟ ಮಾಡಿಸಿರುತ್ತಾನೆ ಅಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಫೋಟೊ ತೋರಿಸಿ ಅದರಲ್ಲಿ ನಾನು ಇದ್ದೆನು ಎಂದು ಹೇಳಿದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಅದರಲ್ಲಿ ಫಿರ್ಯಾದಿ, ಆರೋಪಿ, ನಾನು ಮತ್ತು ಇಲಾಖಾ ಅಧಿಕಾರಿಗಳು ಇರುತ್ತಾರೆ ಅಂದರೆ ಸರಿಯಲ್ಲ.

3. ಫಿರ್ಯಾದಿ ಒಬ್ಬ ಅಮರಗುಂಡಯ್ಯ ತಂದೆ ಅಮರಯ್ಯ ಇವರಿಗೆ ಸೇರಿದ ಮಲ್ಲಿನ ಮಡಗು ಗ್ರಾಮದ ಜಮೀನು ಸರ್ವೆ ನಂ. 46/*/1 ಕ್ಷೇತ್ರ 3 ಎಕರೆ 14 ಗುಂಟೆ ಖರೀದಿ ಕರಾರು ಪತ್ರ ಮಾಡಿಕೊಂಡಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಗೆ ಹಂಪಣ್ಣ ಇವರು ಸಾಕ್ಷಿಯನ್ನು ಸಹಿ ಮಾಡಿರುತ್ತಾರೆ ಅಂದರೆ ಸರಿಯಲ್ಲ. ಸದರಿ ಅಮರಗುಂಡಯ್ಯ ಸ್ವಾಮಿ ಈ ಪ್ರಕರಣದ ಫಿರ್ಯಾದಿ ಚಿಕ್ಕಪ್ಪ ಅಂದರೆ ಸರಿ. ಅಮರಗಂಡಯ್ಯ ಇವರ ಜಮೀನು ಪರಿಶಿಷ್ಟ ಜಾತಿ ಮತ್ತು ಪಂಗಡಗೆ ಮಾರಾಟ ಮಾಡಿಸುವುದಾಗಿ ಫಿರ್ಯಾದಿ ಸದರಿ ಕರಾರು ಪತ್ರ ಬರೆಸಿಕೊಂಡಿರುತ್ತಾನೆ ಅಂದರೆ ಸರಿಯಲ್ಲ. ಆರೋಪಿತನ ಜಮೀನು ಪರಿಶಿಷ್ಟ ಜಾತಿ ಮತ್ತು ಪಂಗಡದ ಇಲಾಖೆಗೆ ಮಾರಾಟ ಮಾಡಿಸುವುದಾಗಿ ಫಿರ್ಯಾದಿ ಒಪ್ಪಿಕೊಂಡು ಪ್ರತಿ ಎಕರೆಗೆ ರೂ. 2,00,000/- ಕಮೀಷನ ಪಡೆಯುವ ಬಗ್ಗೆ ಮಾತು ಕತೆ ಆಗಿತ್ತು ಅಂದರೆ ಸರಿಯಲ್ಲ. ಅದಕ್ಕೆ ಬೇಕಾಗುವ

ದಾಖಲೆಗಳನ್ನು ಆರೋಪಿತನಿಂದ ಬರೆಸಿಕೊಳ್ಳುವಾಗ, ಆರೋಪಿತನಿಗೆ ಸೇರಿದ ಚಕ ನ್ನು ಪಡೆದಿದ್ದ, ಅದನ್ನು ಉಪಯೋಗಿಸಿ ಈ ಪ್ರಕರಣ ದಾಖಲಿಸಿರುತ್ತಾನೆ ಅಂದರೆ ಸರಿಯಲ್ಲ. 2021 ನೇ ಸಾಲಿನಲ್ಲಿ ಈ ಪ್ರಕರಣದ ಫಿರ್ಯಾದಿಯ ವಿರುದ್ದ ಇದೇ ನ್ಯಾಯಾಲಯದಲ್ಲೆ ಚಕ್ ಬೌನ್ಸ ಪ್ರಕರಣ ದಾಖಲು ಆಗಿತ್ತು ಅಂದರೆ ನನಗೆ ಮಾಹಿತಿ ಇಲ್ಲ. ಸಿಸಿ ನಂ. 2979/2021 ರಂತೆ ನನ್ನ ವಿರುದ್ದ ಇದೇ ನ್ಯಾಯಾಲಯದಲ್ಲಿ ಚಕ್ ಬೌನ್ಸ್ ಪ್ರಕರಣ ದಾಖಲು ಆಗಿತ್ತು ಅಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು ಚೆಕ್ಕಿನ ಮೋತ್ತ ಮರುಪಾವತಿ ಮಾಡಿದ ನಂತರ ಮುಕ್ತಾಯಗೊಂಡಿರುತ್ತದೆ. ಆರೋಪಿತನಿಗೆ ಕೆ. ಗುಡದಿನ್ನಿ ಮತ್ತು ಮದ್ಲಾಪೂರು ಗ್ರಾಮದಲ್ಲಿ ಒಟ್ಟು 6 ಎಕರೆ ನೀರಾವರಿ ಜಮೀನು ಇದೆ ಅಂದರೆ ಸಾಕ್ಷಿ ಕೆ. ಗುಡದಿನ್ನಿ ಗ್ರಾಮದಲ್ಲಿ 4 ಎಕರೆ ಇರುವುದು ಗೋತ್ತು ಎಂದು ಹೇಳುತ್ತಾರೆ. ಆರೋಪಿತನ ಮಗ ಮಾನ್ವಿ ಡಿಗ್ರಿ ಕಾಲೇಜ್ ನಲ್ಲಿ ಅತೀಥಿ ಉಪನ್ಯಾಸಕ ಎಂದು ಕೆಲಸ ಮಾಡುತ್ತಾರೆ ಅಂದರೆ ನನಗೆ ಗೋತ್ತಿಲ್ಲ. ಆರೋಪಿತನ ಮಗನಿಗೆ ತಿಂಗಳಿಗೆ ರೂ. 28,000/- ಸಂಬಳ ಇದೆ ಅಂದರೆ ನನಗೆ ಗೋತ್ತಿಲ್ಲ. ಆರೋಪಿ ಜಮೀನುಗಳಿಂದ ವಾರ್ಷಿಕ ರೂ. 3,00,000/- ಸಂಪಾದನೆ ಮಾಡುತ್ತಾನೆ ಅಂದರೆ ಯಾವುದೇ ಉತ್ತರ ನೀಡಿರುವುದಿಲ್ಲ. ಆರೋಪಿತನ ಕುಟುಂಬಕ್ಕೆ ಹಣದ ಅವಶ್ಯಕತೆ ಇಲ್ಲ ಅಂದರೆ ಸರಿಯಲ್ಲ. ನಾನು ರೈತ ಸಂಘದ ಸದಸ್ಯ ಇರುವುದಿಲ್ಲ. ನಾನು, ಫಿರ್ಯಾದಿ ಮತ್ತು ಹಂಪಣ್ಣ ಜೊತೆಯಲ್ಲಿ ಇರುತ್ತೇವೆ ಅಂದರೆ ಸರಿಯಲ್ಲ. ನಾನು ಮೊದಲು ರೈತ ಸಂಘದ ಮುಖಂಡ ಇದೆ, ಆದರಿಂದ ನನ್ನನ್ನು ವಜಾಗೊಳಿಸಿರುತಾರೆ ಅಂದರೆ ಸರಿಯಲ್ಲ. ಆರೋಪಿ ಫಿರ್ಯಾಧಿಗೆ ದಿಃ 10-12-2020 ರಂದು ರೂ. 8,00,000/- ಮೊತ್ತದ ಚೆಕ್ ನ್ನು ಕೊಟ್ಟಿರುತ್ತಾರೆ. ಅದೇ ದಿನ ಆರೋಪಿ ಇನ್ನೊಂದು ರೂ. 8,00,000/- ಮೊತ್ತದ ಚೆಕ್ ನ್ನು ಕೊಟ್ಟಿರುತ್ತಾರೆ. ಸದರಿ ಚೆಕ್ ಗಳನ್ನು ದಿಃ 10-01-2021 ರಂದು ಫಿರ್ಯಾದಿ ತನ್ನ ಖಾತೆಗೆ ಜಮೆಗೆ ಸಲ್ಲಿಸಿರುತ್ತಾನೆ. ದಿಃ 12-01-2021 ರಂದು ಖಾತೆಯಲ್ಲಿ ಹಣ ಇಲ್ಲ ಎಂದು ಹಿಂಬರಹ ಕೊಟ್ಟಿರುತ್ತಾರೆ. ವಕೀಲರು ಮೂಲಕ ನೋಟಿಸ್ ನೀಡಿದ ದಿನಾಂಕ ಗೋತ್ತಿಲ್ಲ. ಆರೋಪಿ ಫಿರ್ಯಾದಿಗೆ ತನ್ನ ಖಾತೆಗೆ ಸೇರಿದ ಯಾವುದೇ ಚೆಕ್ ಗಳನ್ನು ಹಣ ಮರುಪಾವತಿಗಾಗಿ

CC No. 957 /2021
CW-2

ನೀಡಿಲ್ಲ ಅಂದರೆ ಸರಿಯಲ್ಲ. ಫಿರ್ಯಾದಿಗೆ ಸಹಾಯ ಮಾಡಲು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ.)

ಓ.ಹೇ.ಕೆ.ಸರಿ ಇದೆ

**ಪ್ರ.ದ.ನ್ಯಾದಂ.ಗಳು. ಮಾನ್ವಿ**